ಹುಡುಗ ಮೊನ್ನೆ ಬೆಂಗಳೂರಲ್ಲಿ ಸಿಕ್ಕಾಗ ಸಿಟ್ಟಿನಿಂದ ಹೇಳಿದ್ದು ನೆನಪಾಗಿ, ಶಿವಣ್ಣಯ್ಯ ಇದ್ದಕ್ಕಿದ್ದಂತೆ ರಾಕ್ಷಸನಂತೆ ಕಂಡುಬಂದು 'ದೊಡ್ಡವ್ವಾರ ಮನಿಗೆ ಹೋಗಿ ಬತ್ತೀನಿ' ಅಂದುಕೊಳ್ಳುತ್ತ ರಾಜಣ್ಣ ತಮ್ಮ ಗೋಡೆಗೇ ಹೊಂದಿಕೊಂಡಿದ್ದ ದೊಡ್ಡವ್ವನ ಮನೆಗೆ ಕಾಲಿಕ್ಕಿದ.

ಗೌರಕ್ಕನ ಮಗಳು ಹತ್ತು ವರ್ಷದ ಹುಡುಗಿ ಸಾವಿತ್ರಿ ಇವನನ್ನು ನೋಡಿದೇಟಿಗೆ 'ಮಾಮಣ್ಣ, ನಮ್ಮ ಮಾಮಣ್ಣ' ಎಂದು ಓಡೋಡಿಕೊಂಡು ತೆಕ್ಕೆ ಬಿತ್ತು. 'ಎಷ್ಟನೇ ಕ್ಲಾಸುಡ್ಗಿ' ಅಂದ. 'ಎರಾಡು' ಎಂದ ಹುಡುಗಿ ಕೆನ್ನೆ ಉಬ್ಬಿಸಿಕೊಂಡು ಯಾರನ್ನೋ ಹುಡುಕುವಂತೆ ಒಂದು ರೌಂಡು ಕತ್ತು ತಿರುಗಿಸಿ ಮೆತ್ತಗಿನ ದನೀಲಿ, 'ಮಾಮಣ್ಣ! ಕಾಸು ಕ್ವಡ್ ಮಾಮಣ್ಣ' ಅಂದಿತು. ಜೇಬೆಲ್ಲ ತಡತಡಕಿ ಉಳಿದಿದ್ದ ಚಿಲ್ಲರೆ ತೆಗೆದು ಹುಡುಗಿಯ ಕೈಗಿಟ್ಟ. ಕಾಸು ಕಂಡು ಅರಳಿಕೊಂಡ ಹುಡುಗಿ ಛಂಗೆಂದು ಕೋಣೆಯೊಳಗೆ ಮಂಗರಮಾಯವಾದ ಒಂದು ಚಣಕ್ಕೆ ಕೋಣೆಯೊಳಗಿಂದ ಇಣುಕಿದ ಗೌರಕ್ಕ 'ಒಂದು ಎಂಟಾಣೆ ಇದ್ದರೆ ಕ್ವಟ್ಟಿರು, ರಾಜಣ್ಣ' ಎಂದು ಮೈಯೆಲ್ಲ ಹಿಡಿಮಾಡಿಕೊಂಡು ಕೇಳಿದಾಗ ರಾಜಣ್ಣನ ಹೊಟ್ಟೆ ಉರಿದುಹೋಯಿತು. ಜೇಬಿಗೆ ಕೈಹಾಕಿ ಸಿಕ್ಕಿದ ನೋಟೆರಡನ್ನು ಅವಳ ಕೈಗಿಕ್ಕಿದ.

ಗೌರಕ್ಕ ತುಳುಕಿದ ಕಣ್ಣ ನೀರು ಸೀಟಿಕೊಂಡು ಒಳಗೆ ನಡೆದು, 'ಒಂದಿಷ್ಟೇ ಇಷ್ಟು ಹಾಲಿರುವಂಗಿದೆ, ಕುಡಿತಿಯ' ಅಂದಳು. ಇವನು ಹೂಂ ಅನ್ನಲಿಲ್ಲ, ಊಹೂಂ ಅನ್ನಲಿಲ್ಲ. ಚಣಬಿಟ್ಟು ಸೋಗೆ ಗರಿಗೆ ಬೆಂಕಿಕಡ್ಡಿ ಗೀರಿದ ಸದ್ದು ಕೇಳಿಸಿತು. ಅದರ ಬೆನ್ನಿಗೇ 'ಕಳಕಂಬಿಡ್ತೀಯ, ನಂತಾವಿರಲಿ ಕ್ವಡು' ಎಂಬ ಗೌರಕ್ಕನ ಪಿಸುದನಿಯೂ 'ಇಲ್ಲ, ಉಹೂಂ! ಮಾಮಣ್ಣ ಕ್ವಟ್ಟಿರಾದೂ, ಊಂ, ಇಲ್ಲ ಕ್ವಡಲ್ಲ' ಎಂಬ ಲಂಗದ ಹುಡುಗಿಯ ಗೋಡೆ ಬಿರಿಯುವ ವರಲೂ, ಆ ವರಲನ್ನು ಮುಚ್ಚಿಸಲು ಬಿದ್ದಂಥ ಛಟೀರ್ ಎಂಬ ಏಟಿನ ಸದ್ದೂ, ಅದಕ್ಕೆ ಪ್ರತಿಕ್ರಿಯೆಯಾಗಿ ಮಾಡೇ ಕಳಚಿ ಬೀಳುವಂತೆ ಏರಿದ ಹುಡುಗಿಯ ತಾರಕದ ವರಲುವಿಕೆಯೂ ಕಿವಿ ಸೀಳತೊಡಗಿ ರಾಜಣ್ಣನ ಎದೆಯಲ್ಲಿ ಟ್ರ್ಯಾಕ್ಟರು ಬಿಟ್ಟಂತಾಯಿತು. ಅಷ್ಟರೊಳಗೆ ಗೌರಕ್ಕ ಸ್ಟೀಲು ಕಪ್ಪಲ್ಲಿ ಹಾಲು ತರಲು, 'ಯವ್ವಾ, ನನಿಗೂ ಕ್ವಡೇ' ಎಂದು ಹುಡುಗಿಯ ರಾಗದ ಪರಿ ಬದಲಾಯಿತು. 'ಅಯ್ಯ ಸುಮ್ಕಿರುಡುಗಿ, ವಳಗೆ ಕ್ವಡ್ತಿನಿ' ಎಂಬ ಗೌರಕ್ಕನ ಪುಸಲಾವಣೆಗೆ ಬಗ್ಗದ ಹುಡುಗಿಯನ್ನು ನೋಡುತ್ತ 'ಇದ್ರಲೆ ಅರ್ಧ ಮಾಡಿಕಳ್ತಿವಿ. ಒಂದ್ ಕಪ್ಪು ಕ್ವಡು ಗೌರಕ್ಕ' ಅಂದ ರಾಜಣ್ಣ. 'ನೀನು ಕುಡುದರಪ್ಪ, ಇದ್ರುದೇನು ಇದ್ದೇ ಇದ್ದುದೆ' ಅಂದು ಗೌರಕ್ಕ ಯಾವ ರೋಷದಲ್ಲಿ ಹುಡುಗೀ ಕೆನ್ನೆಗೆ ಬಿಟ್ಟಳೆಂದರೆ ಐದೂ ಬೆರಳು ಎಳೆಗೆನ್ನೆಯ ಮೇಲೆ ಭರಭರ ಪ್ರಿಂಟು ಒತ್ತಿಬಿಟ್ಟವು.

'ತ್ಚು, ತ್ಚು, ಬಿಡ್‌ಬಿಡು ಗೌರಕ್ಕ, ಎಳೀ ಹುಡುಗೀನ ಹ್ವಡೀತರ?' ಎಂದು ರಾಜಣ್ಣ ಎದ್ದುದಕ್ಕೂ 'ಯೇ... ನೀನು ಕುಡುದರಪ್ಪ ಸುಮ್ಮಕೆ' ಎಂದು ಗೌರಕ್ಕ ಕೈಯನ್ನು ಅಡ್ಡ ತಂದುದಕ್ಕೂ ಸರಿಯಾಗಿ ಹಾಲಿನ ಕಪ್ಪು ಠಪ್ಪೆಂದು ಮಗುಚಿ ಬಿದ್ದು ಬಗ್ಗಡದ ನೆಲ ಒಂದೇ ಚಣದೊಳಗೆ ಹಾಲೆಲ್ಲ ಹೀರಿಕೊಂಡು ಭೂಪಟದಂಥ ಒದ್ದೆ ಗುರುತು ಮಾತ್ರ ಮೂಡತೊಡಗಿತು. ಅಲ್ಲೇ ಮೂಲೆಯಲ್ಲಿ ಮಂಡಿಗೆ ಮುಖವಿಕ್ಕಿ ಬೆಪ್ಪಾಗಿ ಕುಕ್ಕರು ಬಡಿದ ಹುಡುಗಿ ರಾಜಣ್ಣನ್ನ ಒಂದು ಸಲ, ಗೌರಕ್ಕನ್ನ ಒಂದು ಸಲ, ಬಿದ್ದು ಲೊಡಲೊಡಗುಟ್ಟುತ್ತ ತಿರುಗತ್ತಲೇ ಇದ್ದ ಸ್ಟೀಲು ಕಪ್ಪನ್ನ ಒಂದು ಸಲ ಬಿಕ್ಕುತ್ತಲೇ ನೋಡನೋಡುತ್ತಿರುವಂತೆ, ಒಣ ಹೆಸರುಕಾಳನ್ನು ಕಡಿಯುತ್ತಾ ಇನ್ನೊಂದು ಪಾತ್ರ ರಂಗವನ್ನು ಪ್ರವೇಶಿಸಿತು.

ಗೌರಕ್ಕನ ಹಣೆಯ ನಿರಿಗೆ ಸಡಿಲಾಗಿ, 'ಚಡ್ಡೀನೂ ಇಕ್ಕೆಳದಂಗೆ ಇದೆತ್ತಲಾಗಿ ಓಗಿದ್ಯಲ' ಎಂದು ಆ ಸಿಂಬಳಸುರುಕ ಹುಡುಗನ್ನ ಬರಸೆಳೆದು ಮುತ್ತುಕೊಟ್ಟಳು. 'ಇವನೂ ನಿನಮಗನೆ ಅಲ್ಲವ' ಅಂದ ರಾಜಣ್ಣನ ಕಡೆಗೆ ಉರಿಮುಖದಲ್ಲಿ ತಿರುಗಿದವಳೇ ಚಣಹೊತ್ತು ಬಿಟ್ಟು 'ಹೊಸಬನಂಗೆ